ಬಂದಿದೆ. 9350 ಉಪಾಧ್ಯಾಯರುಗಳನ್ನು ನೇಮಕ ಮಾಡುವಾಗ ಯಾರೂ ಮಧ್ಯೆ ಪ್ರವೇಶ ಮಾಡಲಿಲ್ಲ. ಇದೇ ರೀತಿ ಮುಂದೆ ಸಹ ಅದೇ ರೀತಿ ಆದರೆ ಎಲ್ಲಾ ಹಳ್ಳಿಗಳಿಗೆ ಉಪಾಧ್ಯಾಯರನ್ನು ನೇಮಕ ಮಾಡಲು ಅನುಕೂಲವಾಗಿರತಕ್ಕಂಥ ವಾತಾವರಣ ಇದೆ, ಅದನ್ನು ಮುಂದುವರೆಸಿಕೊಂಡು ಬರಬಹುದು ಎನ್ನುವ ವಿಷಯವನ್ನು ತಮಗೆ ತಿಳಿಸುತ್ತೇನೆ.

ಶ್ರೀ ಬಿ. ಬಿ. ಶಿವಪ್ಪ : ಒಂಭತ್ತು ಸಾವಿರ ಚಿಲ್ಲರೆ ಉಪಾಧ್ಯಾಯರುಗಳನ್ನು ನೇಮಕ ಮಾಡದಂಥ ಸಂದರ್ಭದಲ್ಲಿ ಶಾಸಕರು ಯಾರೂ ಪ್ರವೇಶ ಮಾಡಲಿಲ್ಲ. ಆದರೆ ಒಂದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅನೇಕ ಉಪಾಧ್ಯಾಯರು ಹಳ್ಳಿಗೆ ಹೋಗಿ ಚಾರ್ಜು ತೆಗೆದುಕೊಂಡು ನಂತರ ರಜೆ ಹಾಕಿಕೊಂಡು ಹೊರಟು ಹೋಗಿದ್ದಾರೆ. ಇಲ್ಲಿಯವರೆಗೆ ಶಾಲೆಗೆ ಬಂದಿಲ್ಲ. ಅಂತಹದ್ದು ತಮ್ಮ ಗಮನಕ್ಕೆ ಬಂದರೆ ಯಾರನ್ನು ಯಾವ ಶಾಲೆಗೆ ನೇಮಕ ಮಾಡಿದ್ದೀರಿ ಅವರನ್ನು ಅದೇ ಶಾಲೆಗೆ ತೆಗೆದುಕೊಳ್ಳಬೇಕು. ತೆಗೆದುಕೊಳ್ಳದಿದ್ದರೆ ತಕ್ಷಣ ಅವರನ್ನು ನೇಮಕಾತಿಯನ್ನು ರದ್ದುಪಡಿಸಿ. ತಕ್ಷಣ ಆ ಜಾಗಕ್ಕೆ ಬೇರೆಯವರನ್ನು ನೇಮಕಾತಿ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿದರೆ ಬಹುಶಃ ಉಪಾಧ್ಯಾಯರುಗಳು ಹಳ್ಳಿಯಲ್ಲಿ ನಿಲ್ಲುವುದಕ್ಕೆ ಸಾಧ್ಯವಾಗುತ್ತದೆ ಎಂಬುದು ನನ್ನ ಅಭಿಪ್ರಾಯ.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಇದನ್ನು ಖಂಡಿತ ಮಾಡಬೇಕೆಂದು ಆಸೆಯಿಂದ ಮಾಡುತ್ತಿದ್ದೇವೆ. ಅವರು ಹೋಗಲೇ ಬೇಕು ಎಂದು ಕಡ್ಡಾಯವಾಗಿ ಮಾಡಿದ್ದೇವೆ. ಅವರು ಹೋಗದಿದ್ದರೆ ಖಂಡಿತ ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆ.

ಏಳನೇ ತರಗತಿ ಪಬ್ಲಿಕ್ ಪರೀಕ್ಷೆ ಕುರಿತು.

85 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣ ಸಂಸ್ಥೆಗಳ ಶಾಲೆಗಳಲ್ಲಿ ವಿದ್ಯಾರ್ಥಿ ಮತ್ತು ಶಿಕ್ಷಕರ ಅನುಪಾತವೇನು?

ಆ) 1 ರಿಂದ 7ನೇ ತರಗತಿಯವರೆಗೆ ಕನಿಷ್ಟ ಎಷ್ಟು ಶಿಕ್ಷಕರು ಇರಲೇಬೇಕೆಂದು ಸರ್ಕಾರ ನಿಗಧಿಮಾಡಿದೆಯೇ?

ಇ) ಈ ಅನುಪಾತದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಕೊರತೆ ಇರುವ ಶಿಕ್ಷಕರ ಸಂಖ್ಯೆ ಎಷ್ಟು? ಇಷ್ಟೊಂದು ಶಿಕ್ಷಕರ ಕೊರತೆ ಇದ್ದಾಗ್ಯೂ 7ನೇ ತರಗತಿ ಪರೀಕ್ಷೆಯನ್ನು ಪಬ್ಲಿಕ್ ಪರೀಕ್ಷೆಯಾಗಿ ಪರಿವರ್ತಿಸಿದಲ್ಲಿ ಗ್ರಾಮೀಣ ಪ್ರದೇಶದ ಶಿಕ್ಷಕರ ಕೊರತೆಯಿಂದಾಗಿ ಪಾಠ ಪ್ರವಚನಗಳೇ ನಡೆಯದಿರುವ ಶಾಲೆಗಳ ವ್ಯಾಸಾಂಗ ಮಾಡುವ ಮಕ್ಕಳ ಭವಿಷ್ಯಕ್ಕೆ ಮಾರಕವಾಗುವುದಿಲ್ಲವೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 1,62,795 ಶಿಕ್ಷಕರುಗಳು 78,76 ಲಕ್ಷ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದ್ದಾರೆ. ಅನುಪಾತವು 1:46 ಆಗಿರುತ್ತದೆ.

ಆ) ಈಗ ಸರ್ಕಾರದ ನೀತಿಯಂತೆ ಎಲ್ಲಾ ಕಿರಿಯ ಪ್ರಾಥಮಿಕ ಶಾಲೆಗಳಿಗೆ ಅಂದರೆ 1 ರಿಂದ 4 ತರಗತಿಗಳಿರುವಲ್ಲಿ ಕನಿಷ್ಟ ಇಬ್ಬರು ಶಿಕ್ಷಕರು ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಅಂದರೆ 1 ರಿಂದ 7ನೇ ತರಗತಿ ಇರುವಲ್ಲಿ ಕನಿಷ್ಟ ನಾಲ್ಕು ಜನ ಶಿಕ್ಷಕರಿರುವಂತೆ ನೋಡಿಕೊಳ್ಳಲಾಗುತ್ತಿದೆ.

ಇ) 7ನೇ ತರಗತಿ ವಿದ್ಯಾರ್ಥಿಗಳಿಗೆ ಶಿಕ್ಷಕರ ಕೊರತೆ ಇರುವುದಿಲ್ಲ. 7ನೇ ತರಗತಿ ಪಬ್ಲಿಕ್ ಪರೀಕ್ಷೆ ಯಾವುದೇ ಮಾರಕವಾಗುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂಥ ಉತ್ತರಗಳು ತುಂಬ ಅಸಮರ್ಪಕವಾಗಿದೆಯೆಂದು ನನಗನ್ನಿಸುತ್ತದೆ. ಏಕೆಂದರೆ ಅವರು ಉತ್ತರದಲ್ಲಿ 1ನೇ ತರಗತಿಯಿಂದ 4ನೇ ತರಗತಿಯವರೆಗೆ ಇಬ್ಬರು ಶಿಕ್ಷಕರಿರುವಂತೆ ಮತ್ತು 1 ನೇ ತರಗತಿಯಿಂದ 7ನೇ ತರಗತಿಯವರೆಗೆ 4 ಜನ ಶಿಕ್ಷರಿರುವಂತೆ ನೋಡಿ ಕೊಳ್ಳುತ್ತೇವೆಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು 7 ನೇ ತರಗತಿಗೆ ಪಬ್ಲಿಕ್ ಪರೀಕ್ಷೆಯನ್ನು ಮಾಡಿಯೇ ಮಾಡುತ್ತೇವೆಂದು ಇಡೀ ರಾಜ್ಯದಲ್ಲಿ ಪ್ರಚಾರ ಮಾಡಿದಂಥ ಹಿನ್ನೆಲೆಯಲ್ಲಿ ಇಡೀ ರಾಜ್ಯದಲ್ಲಿ ಇದರ ಬಗ್ಗೆ ಕಳವಳ ಉಂಟಾಗಿದೆ. ಈಗಾಗಲೇ ಶಿವಪ್ಪನವರು ಕೇಳಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ 1ನೇ ತರಗತಿಯಿಂದ 7ನೇ ತರಗತಿಯವರೆಗೆ 4 ಜನ ಶಿಕ್ಷಕರು ಇಲ್ಲ. ಇದು ಮಾನ್ಯ ಮಂತ್ರಿಗಳ ಗಮನಕ್ಕೂ ಬಂದಿದೆ. 1 ರಿಂದ 7ನೇ ತರಗತಿಯವರೆಗೆ ಕೇವಲ ಒಬ್ಬ ಶಿಕ್ಷಕ ಇದ್ದಾರೆ. ನನ್ನ ಕ್ಷೇತ್ರದಲ್ಲಿ ಇಬ್ಬರು ಶಿಕ್ಷಕರಿದ್ದರು. ಅವರಲ್ಲೂ ಒಬ್ಬರನ್ನು ಮಾನ್ಯ ಮುಖ್ಯಮಂತ್ರಿಗಳೇ ವರ್ಗ ಮಾಡಿದ್ದಾರೆ ಮೊನ್ನೆ ಮೊನ್ನೆ ವರ್ಗಾವಣೆ ಆದೇಶ ಬಂದಿದೆ. ಈ ರೀತಿ ಯಾದರೆ ಇಂಥಹ ಶಾಲೆಯಲ್ಲಿ ಓದತಕ್ಕಂಥ ಮಕ್ಕಳ ಜೀವನ ಹಾಳಾಗುವುದಿಲ್ಲವೇ?ಇಂಥ ಪರಿಸ್ಥಿತಿಯಲ್ಲಿ ಪಬ್ಲಿಕ್ ಪರೀಕ್ಷೆಯನ್ನು ಮಾಡಿದರೆ ಹೇಗೆ? ದಯಮಾಡಿ ಈ ಅನುಪಾತದ ಆಧಾರದ ಮೇಲೆ ನೀವು ಏನು ಉತ್ತರ ಕೊಟ್ಟಿದ್ದೀರಿ, ಶಿಕ್ಷಕ ಮತ್ತು ವಿದ್ಯಾರ್ಥಿಗಳ ಅನುಪಾತದ ಆಧಾರದ ಮೇಲೆ 40:1 ಏನು ಇರಬೇಕೆಂದು ಇದೆ, ಈ ಅನುಪಾತದಲ್ಲಿದ್ದಾಗ ಮಾತ್ರ ಅಥವಾ 4 ಜನ ಶಿಕ್ಷಕರಿದ್ದಾಗ ಮಾತ್ರ ಮಾಡಿದರೆ ನ್ಯಾಯೋಜಿತವಾಗುತ್ತದೆ, ಇಲ್ಲದಿದ್ದರೆ ಬಹಳಷ್ಟು ಜನ ವಿದ್ಯಾರ್ಥಿಗಳ ಬಾಳು ಹಾಳಾಗುತ್ತದೆ ಎಂದು ಕಳವಳ ಹೊಂದಿದ್ದಾರೆ. ಆದ್ದರಿಂದ ತಾವು ಪಬ್ಲಿಕ್ ಪರೀಕ್ಷೆಯ ನಿರ್ಣಯವನ್ನು ಈ ಹಿನ್ನೆಲೆಯಲ್ಲಿ ಮುಂದೆ ಹಾಕುತ್ತೀರಾ? ಈ ವರ್ಷ ಇದನ್ನು ಕ್ಯಾನ್ಸಲ್ ಮಾಡಿ ಮುಂದಿನ ವರ್ಷದಿಂದ ಇದನ್ನು ಮಾಡುವ ಆಲೋಚನೆ ಸರ್ಕಾರಕ್ಕಿದೆಯೇ ಎಂಬುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೇ, ನನ್ನ ಸ್ನೇಹಿತರ ಕಳಕಳಿ ಪಬ್ಲಿಕ್ ಪರೀಕ್ಷೆಯನ್ನು ಮುಂದೆ ಹಾಕಬೇಕೆಂಬುದೇ ಅವರ ಅಭಿಪ್ರಾಯವಾಗಿರುತ್ತದೆ. ಈಗಾಗಲೇ ನಾನು ಹೇಳಿದ್ದೇನೆ, 18700 ಉಪಾಧ್ಯಾಯರುಗಳನ್ನು ನೇಮಕ ಮಾಡಿದ್ದೇವೆ, ಇವರೆಲ್ಲಾ ಹಳ್ಳಿಗಳಿಗೆ ಹೋಗಿದ್ದಾರೆ. ಕೆಲವು ಕಡೆ ಇಬ್ಬರು ಶಿಕ್ಷಕರಿರುವ ಕಡೆ 1 ರಿಂದ 4ನೇ ತರಗತಿಯಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಿದೆ. ನೀವೇನು ಹೇಳುತ್ತಿದ್ದೀರಿ ಅದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಸತ್ಯಾಂಶವಿದೆ. ಹಳ್ಳಿಗಳಿಗೆ ಉಪಾಧ್ಯಾಯರು ಹೋಗದೆ ಅಲ್ಲಿ ಅಭ್ಯಾಸ ಮಾಡತಕ್ಕಂಥ 1ನೇ ತರಗತಿಯಿಂದ 4ನೇ ತರಗತಿಯವರೆಗೆ ಉಪಾಧ್ಯಾಯರ ಸಂಖ್ಯೆ ಕಡಿಮೆಯಿತ್ತು. ಈಗ ಆ ಸಂಖ್ಯೆ ಸರಿಯಾಗಿದೆ ಮತ್ತು ಆ ರೀತಿಯ ಗೊಂದಲದ ಪರಿಸ್ಥಿತಿ ಇವೊತ್ತು 7ನೇ ತರಗತಿಯಲ್ಲಿ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಪಬ್ಲಿಕ್ ಪರೀಕ್ಷೆಯ ಬಗ್ಗೆ ಮೇಲ್ಮನೆಯಲ್ಲೂ ಪ್ರಶ್ನೆ ಕೇಳಿದ್ದರು ಅದಕ್ಕೆ ಉತ್ತರವನ್ನು ಕೊಟ್ಟಿದ್ದೇನೆ, ಇವೊತ್ತು 7ನೇ ತರಗತಿಗೆ ಪಬ್ಲಿಕ್ ಪರೀಕ್ಷೆಯನ್ನು ಮಾಡುವುದಕ್ಕೆ ಹೊರಟಿರುವುದು ನಮ್ಮ ಪ್ರತಿಷ್ಠೆಯ ಪ್ರಶ್ನೆಗಳಲ್ಲ ಅಥವಾ ಇಲಾಖೆಯ ಪ್ರತಿಷ್ಠೆಲಿಲ್ಲ, ಮಕ್ಕಳ ಹಿತದೃಷ್ಟಿಯಿಂದ ನಾವು ಈ ಕಾರ್ಯಕ್ರಮವನ್ನು ಕೈಗೊಳ್ಳುತ್ತಿರುವುದು. ಶಾಲೆಗಳು ಜೂನ್ 1ನೇ ತಾರೀಖಿನಿಂದ ಪ್ರಾರಂಭವಾಗಿರತಕ್ಕಂಥ ಹಿನ್ನೆಲೆಯಲ್ಲಿ ಉಪಾಧ್ಯಾಯರು ಪ್ರತಿನಿತ್ಯ ಪಾಠವನ್ನು ಮಾಡತಕ್ಕಂಥದ್ದು ಅವರ ಆದ್ಯಕರ್ತವ್ಯವಾಗಿರಬೇಕು. ಕೇವಲ ಪರೀಕ್ಷೆ ಮಾಡಿದರೂ ಅವರು ಪರೀಕ್ಷೆಗೆ ಸಿದ್ಧರಾಗಿರಬೇಕು, ಇದಕ್ಕೆ ಮಕ್ಕಳು ಸಹ ಸಿದ್ಧರಿರಬೇಕು. ಮಕ್ಕಳಿಗೆ ಉಪಾಧ್ಯಾಯರು ಯಾವ ರೀತಿ ಮಾರ್ಗದರ್ಶನವನ್ನು ನೀಡುತ್ತಾರೋ ಅದೇ ರೀತಿಯಲ್ಲಿ ಮಕ್ಕಳು ನಡೆದುಕೊಂಡು ಹೋಗುತ್ತಾರೆ. ಉಪಾಧ್ಯಾಯರು ಮೊದಲಿನಿಂದ ಪಾಠವನ್ನು ಚೆನ್ನಾಗಿ ಮಾಡುವುದಕ್ಕೆ ಸಂಬಂಧಪಟ್ಟಂತೆ ಚರ್ಚಿಸಲು ಅನೇಕ ಜನ ವಿದ್ಯಾವಂತರನ್ನು ಕರೆಸಿ, ಸಾಹಿತಿಗಳನ್ನು ಕರೆಸಿ, ಉಪ ಕುಲಪತಿಗಳನ್ನು ಕರೆಸಿ, ಮಾಜಿ ಉಪಕುಲಪತಿಗಳನ್ನು ಮತ್ತು ಇಲಾಖೆಯ ತಜ್ಞರನ್ನು ಕರೆಸಿ ಒಂದು ಅಭಿಪ್ರಾಯಕ್ಕೆ ಬಂದು ಇದರಿಂದ ಮಕ್ಕಳಿಗೆ ಹೆಚ್ಚು ಉಪಯೋಗವಾಗುವುದರಿಂದ ಈ ಕೆಲಸ ಮಾಡಲೇಬೇಕು ಎಂದು ಹೇಳಿ ಹೆಚ್ಚು ಜನ ಅಭಿಪ್ರಾಯಪಟ್ಟಿದ್ದರಿಂದ ಇದನ್ನು ಮಾಡಿದ್ದೇ ಹೊರತು ಇದರಲ್ಲಿ ನಮ್ಮ ಪ್ರತಿಷ್ಠೆಯಾಗಲೀ, ಸರ್ಕಾರದ ಪ್ರತಿಷ್ಠೆಯಾಗಲೀ ಇದರಲ್ಲಿ ಇಲ್ಲ ಮಕ್ಕಳ ವಿಷಯ ಇಲ್ಲಿ ಅವರ ಹಿತದೃಷ್ಟಿಯಲ್ಲಿ ಈ 7ನೇ ತರಗತಿ ಪಬ್ಲಿಕ್ ಪರೀಕ್ಷೆ ಮಾಡಲು ಹೊರಟಿದ್ದು, ಇದೇನು ಬಹಳ ವಿಶೇಷವಾದದ್ದೇನೂ ಅಲ್ಲ, ನಾನು ನಿನ್ನೆ ಇದರ ಬಗ್ಗೆ ಹೇಳಿದೆ, ಈ 7ನೇ ತರಗತಿ ಪಬ್ಲಿಕ್ ಪರೀಕ್ಷೆ ಈಗಲೂ ನಡೆಯುತ್ತಿದೆ, ಪ್ರತಿ ಜಿಲ್ಲಾ ಜಿಲ್ಲಾ ಮಟ್ಟದಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಸೆಟ್ ಮಾಡುತ್ತಾರೆ, ಮಾಡುತ್ತಿದ್ದರು, ಬಹಳ ವರ್ಷಗಳಿಂದ ಅಂದರೆ 1985ರಿಂದಲೂ ಅದೇ ರೀತಿ ಇರತಕ್ಕಂಥದ್ದು, ಈಗಲೂ ಕೂಡ ಅದೇನೇ, ಜಿಲ್ಲಾ ಮಟ್ಟದಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಸೆಟ್ ಮಾಡುತ್ತಾರೆ ಟ್ಯಾಗಆನ್ ಮಾಡುತ್ತೇವೆ, ಅಲ್ಲಿ ಪರೀಕ್ಷೆಗಳನ್ನು ಮಾಡತಕ್ಕಂಥ ಕೇಂದ್ರವಾಗಿರುತ್ತದೆ. ಇದರ ಮೌಲ್ಯಮಾಪನ ಮಾಡಬೇಕಾದರೆ ಅದನ್ನು ಪಕ್ಕದಲ್ಲಿರತಕ್ಕಂಥವರಿಗೆ ಕೊಡುತ್ತೇವೆ, ಇದರಲ್ಲಿ ಕಠಿಣವಾಗಿರತಕ್ಕಂಥದ್ದೇನೂ ಇಲ್ಲ, ಮೊದಲಿದ್ದ ಹಾಗೆಯೇ ಆಗುತ್ತದೆ, ಮಕ್ಕಳು ಯಾವುದೇ

ರೀತಿಯ ಗಾಬರಿ ಪಡತಕ್ಕಂಥ ಅವಶ್ಯಕತೆ ಇಲ್ಲ. ತಂದೆ ತಾಯಿಗಳು ಕೂಡ ಇದರ ಬಗ್ಗೆ ಚಿಂತನೆ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಮಕ್ಕಳನ್ನು ತಂದೆತಾಯಿಗಳನ್ನು ಹಿಂಸೆ ಮಾಡಿ ಈ ವಿದ್ಯಾಭ್ಯಾಸ ಮಾಡಬೇಕು ಎನ್ನುವ ಆಸೆ ಸರ್ಕಾರಕ್ಕಿಲ್ಲ. ಹೈಸ್ಕೂಲಿಗೆ ಹೋಗತಕ್ಕಂಥ ಮಕ್ಕಳ ಗುಣಮಟ್ಟ ಉತ್ತಮವಾಗಿರಲಿ, ಹಳ್ಳಿಗಳಲ್ಲಿ ವಿದ್ಯಾಭ್ಯಾಸ ಸಿಕ್ಕಲಿ ಎನ್ನತಕ್ಕಂಥ ಒಂದೇ ಒಂದು ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆಯೇ ಹೊರತು ಬೇರೆ ಯಾವುದೇ ದೃಷ್ಟಿಯಲ್ಲಿಯೂ ಇದನ್ನು ಮಾಡಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಇದನ್ನು ತಮ್ಮ ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದಾರೆ ಎಂದು ನಾನು ಹೇಳುವುದಿಲ್ಲ, ಮಂತ್ರಿಗಳ ಕಳಕಳಿ ನನಗೆ ಅರ್ಥವಾಗುತ್ತದೆ, ಖಂಡಿತವಾಗಿಯೂ ಕೂಡ ನೀವು ಪ್ರಾಮಾಣಿಕವಾಗಿ ಯೋಚನೆ ಮಾಡುತ್ತಿದ್ದೀರಿ. ವಿದ್ಯಾರ್ಥಿಗಳ ಪ್ರತಿಭೆ ಮೇಲ್ಬರಲಿಕ್ಕೆ ಆದಷ್ಟು ಪರೀಕ್ಷೆಗಳು ಕಟ್ಟುನಿಟ್ಟಾಗಿ ನಡೆಯಬೇಕು ಎನ್ನುವವನು ನಾನು. ಆದರೆ ಹಳ್ಳಿಗಳ ಶಾಲೆಯಲ್ಲಿ ಹೇಳಬೇಕೆಂದರೆ ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ 290 ಮಕ್ಕಳಿದ್ದಾರೆ ಆದರೆ ಇಬ್ಬರು ಶಿಕ್ಷಕರಿದ್ದಾರೆ, ಅವರಲ್ಲಿ ಒಬ್ಬರನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ. ಇಂಥದ್ದು ಬೇಕಾದಷ್ಟು ಶಾಲೆಗಳು ಇವೆ, ಆದರೆ ಉದಾಹರಣೆಗೆ ನಾನು ಒಂದನ್ನು ಹೇಳುತ್ತಿದ್ದೇನೆ. ಇಲ್ಲಿ ಪಾಠಪೇ ನಡೆದಿಲ್ಲ, ಏಕೆಂದರೆ 1 ರಿಂದ 7ನೇ ತರಗತಿಯವರೆಗೆ ಒಬ್ಬಿಬ್ಬರು ಶಿಕ್ಷಕರು ಎಲ್ಲಾ ವಿಷಯಗಳಲ್ಲಿ ಪಾಠ ಮಾಡಬೇಕು ಎಂದರೆ ಕಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಜನರು ಕಳವಳವನ್ನು ಹೊಂದಿದ್ದಾರೆ. ಈ ಹಿನ್ನೆಲೆಯಲ್ಲಿ ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆಯೇ ಹೊರತು ಬೇರೆ ರೀತಿಯಲ್ಲಿ ಅಪಾರ್ಥ ಕಲ್ಪಿಸಬಾರದು.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ, ಸರ್ಕಾರ 7ನೇ ತರಗತಿಗೆ ಪಬ್ಲಿಕ್ ಪರೀಕ್ಷೆಯನ್ನು ಮಾಡಬೇಕೆಂದು ಹೇಳಿ ಯಾವಾಗ ನಿರ್ಧಾರವನ್ನು ತೆಗೆದುಕೊಂಡಿತು? ಈ ನಿರ್ಧಾರವನ್ನು ಶಾಲೆಗಳಿಗೆ ಯಾವಾಗ ತಿಳಿಸಲಾಗಿದ್ದಿತು ಎನ್ನುವುದರ ಬಗ್ಗೆ ನಾನು ಪ್ರಶ್ನೆ ಕೇಳಿದ್ದೆ. ಅದಕ್ಕೆ ಉತ್ತರವನ್ನು ಕೊಡಬೇಕು.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೇ, ಸರ್ಕಾರ ಯಾವಾಗ ನಿರ್ಧಾರ ತೆಗೆದುಕೊಂಡಿತು ಎಂದರೆ, ಮೂರು ತಿಂಗಳಿಗೊಮ್ಮೆ ಮೀಟಿಂಗಗೆ ನಾವು ಎಲ್ಲಾ ಡಿ.ಡಿ.ಪಿ.ಐ. ಗಳನ್ನು ಕರೆಸಿಬಿಟ್ಟು, ಸೆಕ್ರೆಟರಿಯಟ್‌ನವರು ಸಿ.ಪಿ.ಐ.ನವರೊಂದಿಗೆ ಮೀಟಿಂಗ್ ಮಾಡುತ್ತೇವೆ. ಅಲ್ಲಿ ಏನೇನು ಮಾಡಬೇಕು ಈ ಒಂದು ವರ್ಷದೊಳಗೆ ಎಂಬುದನ್ನು ನಾವು ಅವರಿಗೆ ತಿಳಿಸುತ್ತೇವೆ. ಈ ಪಬ್ಲಿಸಿಟಿ ಆಗಿಲ್ಲದೇ ಅನೇಕ ಜನರಿಗೆ ಗೊತ್ತಿಲ್ಲದಿದ್ದರೂ ಸಹ ಇಲಾಖೆಯ ಉಪ ನಿರ್ದೇಶಕರಿಗೆಲ್ಲಾ ಗೊತ್ತಿದೆ, ಇದನ್ನು ಮಾಡಿಯೇ ಮಾಡುತ್ತಾರೆ ಎಂಬುದು ಅವರಿಗೆ ಗೊತ್ತಿದೆ. ಅವರು ಈ ವಿಷಯವನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರಿಗೆ ಈ ವಿಷಯವನ್ನು ತಿಳಿಸಿದ್ದಾರೆ. ನಾವು ತಮಗೆ ಹೇಳಬೇಕಾದರೆ ಸ್ವಲ್ಪ ತಡವಾಗಿರಬಹುದು. ಪತ್ರಿಕೆಗಳಲ್ಲಿ ಹೇಳತಕ್ಕಂಥ ಅಭ್ಯಾಸ ಸ್ವಲ್ಪ ಕಡಿಮೆ ನಮಗೆ. ಪಬ್ಲಿಸಿಟಿಯನ್ನು ಆಗಲೇ ಮಾಡಿದ್ದರೆ 6 ತಿಂಗಳ ಮುಂಚೆಯೇ

ಎಲ್ಲರಿಗೂ ಗೊತ್ತಾಗುತ್ತಿತ್ತು. ನಾವು ಎರಡು ತಿಂಗಳ ಹಿಂದೆ ಸಾರ್ವಜನಿಕರಿಗೋಸ್ಕರ ಹೇಳಿಕೆಯನ್ನು ಕೊಟ್ಟಿದ್ದೇವೆ. ಜನಗಳಿಗೆಲ್ಲಾ ಈ ವಿಷಯ ಮೊದಲಿನಿಂದ ಗೊತ್ತಿದೆ. ಇಲಾಖೆಯ ಅಧಿಕಾರಿಗಳು, ಶಾಲೆಯ ಉಪಾಧ್ಯಾಯರು ನಿಷ್ಪೆಯಿಂದ ಪ್ರಾಮಾಣಿಕತೆಯಿಂದ ಇದರ ಬಗ್ಗೆ ಕೆಲಸ ಮಾಡುತ್ತಿದ್ದಾರೆ. ಯಾವುದೇ ರೀತಿಯಲ್ಲಿ ಪೋಷಕವಾಗರತಕ್ಕಂಥವರು ಅನುಮಾನ ಪಡುವ ಅವಶ್ಯಕತೆಯಿಲ್ಲ. ಮಕ್ಕಳ ಹಿತದೃಷ್ಟಿಯಿಂದ ಇದನ್ನು ಮಾಡಿರತಕ್ಕಂಥದ್ದು ಇದರಲ್ಲಿ ಪಬ್ಲಿಕ್ ಪರೀಕ್ಷೆ ಎನ್ನುವ ಪದಗಳನ್ನು ಬಿಟ್ಟರೆ ಬೇರೆ ಯಾವ ವ್ಯತ್ಯಾಸಗಳು ಇದರಲ್ಲಿ ಇಲ್ಲ. ಈ ಹಿಂದೆ ಹೇಗೆ ನಡೆಯುತ್ತಿತ್ತೋ ಅದೇ ರೀತಿಯಲ್ಲಿ ನಡೆಯುತ್ತದೆ.

ಶ್ರೀ ಎ. ರಾಮದಾಸ್ : ಮಾನ್ಯ ನನ್ನ ಪ್ರಶ್ನೆ ಇಷ್ಟೆ. ಜನವರಿ 4ನೇ ತಾರೀಖಿನಿಂದ ಎಲ್ಲಾ ಶಾಲೆಗಳಿಗೆ 7ನೇ ತರಗತಿಗೆ ಪಬ್ಲಿಕ್ ಪರೀಕ್ಷೆಯನ್ನು ನಡೆಸುತ್ತೇವೆಂದು ಲಿಖಿತ ಮೂಲಕವಾದಂಥ ವಿಚಾರ ಹೋಗಿದೆ. ಶಾಲೆಗಳಲ್ಲಿ ಉಪಾಧ್ಯಾಯರನ್ನು 1:40 ಅನುಪಾತದಲ್ಲಿ ನೇಮಕ ಮಾಡಿದ್ದೇವೆ ಎನ್ನುವುದು ಸರಿ. ಆದರೆ ಈ ಉಪಾಧ್ಯಾಯರ ನೇಮಕವಾಗಿರುವುದು ಕಳೆದ ನವೆಂಬರ್, ಡಿಸೆಂಬರ್ ತಿಂಗಳಲ್ಲಿ. ಆ ಶಾಲೆಗಳಲ್ಲಿ ಮಕ್ಕಳಿಗೆ ಪಾಠ ನಡೆದಿರುವುದು ಕೇವಲ ಎರಡು ತಿಂಗಳು ಮಾತ್ರ. ನೀವು ಈಗ ತೆಗೆದುಕೊಂಡಿರುವ ನಿರ್ಣಯ ಸ್ವಾಗತಾರ್ಹವಾಗಿದ್ದರೂ ಪ್ರಸ್ತುತ ಸಾಲಿನಲ್ಲಿ ಕೇವಲ ಎರಡೂವರೆ ತಿಂಗಳ ಸಮಯ ಕೊಟ್ಟ ಹಿನ್ನೆಲೆಯಲ್ಲಿ ಇದು ಸಾಧ್ಯವಾಗದಿರುವುದರಿಂದ ಇದನ್ನು ಮುಂದಿನ ಸಾಲಿನಿಂದ ಮಾಡಿದರೆ ಬಹಳ ಒಳ್ಳೆಯದು ಎನ್ನುವ ಅಭಿಪ್ರಾಯ ನಮ್ಮದು.

ಅಧ್ಯಕ್ಷರು : ಈ ಸಾಲಿನಲ್ಲಿ ಪಬ್ಲಿಕ್ ಪರೀಕ್ಷೆ ಸ್ವಲ್ಪ ಧಾರಾಳವಾಗಿ ಮಾಡಲಿ, ಮುಂದಿನ ಸಾಲಿನಲ್ಲಿ ಸ್ವಲ್ಪ ಸ್ಟ್ರಿಕ್ಟ್ ಆಗಿ ಮಾಡಲಿ.

ಮಾಗಡಿ ತಾಲ್ಲೂಕಿನ ಕುದೂರಿನಲ್ಲಿರುವ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಹಿಳಾ ವೈದ್ಯರಿಲ್ಲದಿರುವುದು.

86 - ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ವಾರ್ತಾ ಮತ್ತು ಪ್ರಚಾರ ಹಾಗು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಮಾಗಡಿ ತಾಲ್ಲೂಕಿನ ಕುದೂರಿನಲ್ಲಿರುವ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಹಿಳಾ ವೈದ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?*

ಆ) *ಹಾಗಿದ್ದಲ್ಲಿ, ಮಹಿಳಾ ವೈದ್ಯಾಧಿಕಾರಿ ಹುದ್ದೆಯನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?*

ಶ್ರೀ ಎಂ. ಸಿ. ನಾಣಯ್ಯ (ವಾರ್ತಾ ಮತ್ತು ಪ್ರಚಾರ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :